ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕನ್ನಡಕ್ಕೆ ಎನ್‌ಕರೇಜ್‌ಮೆಂಟ್ ಕೊಡಬೇಕು ಎಂದು ಹೇಳುತ್ತೀರಿ.

ಅಧ್ಯಕ್ಷರು.—ಅವರು ಸರಳವಾದ, ಸುಂದರ ಶೈಲಿಯಲ್ಲಿ ಹೇಳುತ್ತಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಆ ಕಡೆ ಇರುವವರಿಗೆ ಬಹಳ ಅವಕಾಶ ಕೊಡುತ್ತಿದ್ದೀರಿ ಇದು ನಮಗೆ ಅರ್ಥವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಕೈ ಎತ್ತುವುದಕ್ಕೆ ಬಂದಿದ್ದೀರಿ, ನಾವು ಮಾತನಾಡುವುದಕ್ಕೆ ಬಂದಿದ್ದೇವೆ.

ಶ್ರೀಮತಿ ಮುಕ್ತಾರುನ್ನೀಸಾ.—ಸೆಮಿನಾರ್ಸ್ ನಡೆದಿದೆ, ಫೈನಾನ್ಷಿಯಲ್ ಅಸಿಸ್ಟೆನ್ಸ್‌ನ್ನು ಎಲ್ಲಾ ರಿಸರ್ವಿಂಗ್ ಜರ್ನಲಿಸ್ಟ್ಸ್‌ಗೆ ಕೊಟ್ಟಿದ್ದೇವೆ ಎಂದು ಇದೆ ಮತ್ತು ಪೆನ್‌ಷನ್ ಕೂಡ ಅವರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಎಷ್ಟು ಸೆಮಿನಾರ್ಸ್, ಎಲ್ಲಿ ಮಾಡಿದ್ದೀರಿ? ನನಗೆ ಒಂದು ಇನ್ವಿಟೇಷನ್ ಸಿಕ್ಕಲಿಲ್ಲ, ಪೇಪರ್‌ನಲ್ಲೂ ನೋಡಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಬುದ್ಧಿವಂತಿಕೆಯಿಂದ ನೀವು ಒಂದೇ ಪ್ರಶ್ನೆಗೆ ಒಂದೇ ಉಪಪ್ರಶ್ನೆ ಕೇಳಿ ಎಂದರೆ ಒಂದರಲ್ಲೇ ನಾಲ್ಕೈದು ಪ್ರಶ್ನೆಗಳನ್ನು ಸೇರಿಸಿದ್ದಾರೆ. ಮೊದಲನೇ ಪ್ರಶ್ನೆ, ಕಳೆದ ಡಿಸೆಂಬರ್‌ನಲ್ಲಿ ಇದರ ಅವಧಿ ಮುಗಿದರೂ ಏಕೆ ಇವತ್ತಿನವರೆಗೆ ಪುನರ್ರಚನೆ ಮಾಡಲಿಲ್ಲ ಎನ್ನುವುದು, ಪುನರ್ರಚನೆ ಮಾಡುವಾಗ ಕೆಲವೊಂದು ಪ್ರೊಸೀಜರ್ಸ್ ಇರುತ್ತವೆ. ನಾವು ಬೇರೆ ಬೇರೆ ಜಿಲ್ಲೆಗಳಿಂದ ಹೆಸರುಗಳನ್ನು ತರಿಸಬೇಕು, ಅದು ಬಂದಮೇಲೆ ನಾವು ಮಂತ್ರಿಮಂಡಲದಲ್ಲಿ ಕುಳಿತುಕೊಂಡು ವಿಚಾರಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಇನ್ನು ಸ್ವಲ್ಪ ದಿವಸದಲ್ಲಿ ಇದನ್ನು ಪುನರ್ರಚನೆ ಮಾಡುತ್ತೇವೆ. ಈ ಒಂದು ಅಕಾಡಮಿಗೆ ಕೊಟ್ಟಂಥ ಹಣ ಬಹಳ ಕಡಿಮೆ, ಒಂದು ಲಕ್ಷ ರೂಪಾಯಿಗಳನ್ನು ಇಡೀ ವರ್ಷಕ್ಕೆ ಕೊಟ್ಟಿದೆ. ಇಷ್ಟು ಸ್ವಲ್ಪ ಹಣದಲ್ಲಿ ಅವರು ಕೆಲಸ ಮಾಡಬೇಕು. ಕಳೆದ ವರ್ಷ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ೨೨೦ ಜರ್ನಲಿಸ್ಟ್ಸ್‌ಗೆ ತರಬೇತಿಯನ್ನು ಇವರು ಕೊಟ್ಟಿದ್ದಾರೆ. ಆಮೇಲೆ ಕೆಲವು ಸೆಮಿನಾರ್ಸನ್ನು ಮಾಡಿದ್ದಾರೆ. ಸಬ್ಜೆಕ್ಟ್ ಏನೆಂದರೆ Such as Freedom of the Press.–Rights and responsibilities. ಇದನ್ನು ಆರ್ಗನೈಸ್ ಮಾಡಿದ್ದಾರೆ. ಆದಾದಮೇಲೆ ಪರಿಶಿಷ್ಟ ಪಂಗಡಗಳು ಮತ್ತು ಪರಿಶಿಷ್ಟ ಜಾತಿಗೆ ಸೇರಿದಂಥ ಗ್ರಾಜುಯೇಟ್ಸ್‌ಗೆ ೧೨ ತಿಂಗಳ ಒಂದು ತರಬೇತಿ ಎಂದರೆ ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ತರಬೇತಿ ಕೊಡಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಪ್ರತಿ ತಿಂಗಳು ೫೦೦ ರೂಪಾಯಿಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಆಮೇಲೆ ೪ ಪರೀಕ್ಷೆಗಳನ್ನು ನಡೆಸಿದ್ದಾರೆ. ಆದರಲ್ಲಿ ೫೨ ಅಭ್ಯರ್ಥಿಗಳನ್ನು ಆರಿಸಲಾಗಿದೆ. ಮತ್ತು ಒಂದು ಲೈಬ್ರರಿ ಕ್ರಿಪ್ಪಿಂಗ್ ಸರ್ವೀಸನ್ನು ಶುರು ಮಾಡಿದ್ದಾರೆ. ಇಷ್ಟು ಸ್ವಲ್ಪ ಹಣದಲ್ಲಿ ಇಷ್ಟು ಕೆಲಸವನ್ನು ಅವರು ಮಾಡಿದ್ದಾರೆ.

ರಾಜ್ಯ ಸರ್ಕಾರದ ಹಣದ ಪರಿಸ್ಥಿತಿಯ ಬಗ್ಗೆ

೧೩೮ (೧೬೦) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೨) ಕೇಂದ್ರ ಸರ್ಕಾರದ ಹಣಕಾಸಿನ ರಾಜ್ಯ ಸಚಿವರು ರಾಜ್ಯದ ಹಣಕಾಸಿನ ಸ್ಥಿತಿ ಸರಿಯಿಲ್ಲವೆಂದು ಹೇಳಿಕೆ ಇತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

೪) ಹಾಗಿದ್ದಲ್ಲಿ, ರಾಜ್ಯದ ಹಣಕಾಸಿನ ಸ್ಥಿತಿ ಹೇಗಿದೆ?

೫) ರಾಜ್ಯದ ನ್ಯಾಯಬದ್ಧ ಮಾರುಕಟ್ಟೆ ಸಾಲ ಎಷ್ಟಿದೆ ಹಾಗೂ ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಸಾಲದ ಮೊತ್ತವೆಷ್ಟು? ಈ ಸಾಲಗಳು ವಾರ್ಷಿಕ ಯೋಜನೆಗೆ ಒಳಪಡುವುದೆ?

೬) ೧೯೯೬-೯೭ರ ವಾರ್ಷಿಕ ಯೋಜನೆಗೆ ಅಗತ್ಯವಾದ ಹಣವನ್ನು ಕ್ರೋಢೀಕರಿಸಿಲ್ಲವೆಂದು ಕೇಂದ್ರ ಹಣಕಾಸಿನ ಸಚಿವರ ಆರೋಪದಲ್ಲಿ ಹುರುಳಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

೨) ಹೌದು.

೪) ಸರಿಯಾಗಿದೆ.

ಇ) ರಾಜ್ಯ ಸರ್ಕಾರ ಮತ್ತು ರಾಜ್ಯದ ಉದ್ದಿಮೆಗಳಿಗೆ ೧೯೮೬-೮೭ನೇ ಸಾಲಿಗೆ ನಿರೀಕ್ಷೆಯಾದ ಮಾರುಕಟ್ಟೆ ಸಾಲ ೭೭.೫೭ ಕೋಟಿ ರೂಪಾಯಿಗಳು (ನಿವ್ವಳ), ಹಣಕಾಸು ಸಂಸ್ಥೆಗಳಿಂದ ನಿರೀಕ್ಷಿಸಿರುವ ಸಾಲ ೪೭.೪೨ ಕೋಟಿ ರೂಪಾಯಿಗಳು. ಇವು ವಾರ್ಷಿಕ ಯೋಜನೆ ೧೯೮೬-೮೭ರ ಸಂಪನ್ಮೂಲದಲ್ಲಿ ಸೇರಿವೆ.

ಈ) ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೆ, ವಾರ್ಷಿಕ ಯೋಜನೆಗೆ ಅಗತ್ಯವಾದಂಥ ಹಣವನ್ನು ಕ್ರೋಢೀಕರಿಸುವ ವಿಚಾರದಲ್ಲಿ ಕೇಂದ್ರದ ಹಣಕಾಸಿನ ಸಚಿವರು ರಾಜ್ಯ ಸರ್ಕಾರದ ಮೇಲೆ ಆಪಾದನೆ ಮಾಡಿದ್ದಾರೆ. ಯಾವ ಆಧಾರದ ಮೇಲೆ ಮಾಡಿದ್ದಾರೆ? ಇದರಿಂದ ಸಾರ್ವಜನಿಕರಲ್ಲಿ ತಪ್ಪು ತಿಳುವಳಿಕೆ ಹುಟ್ಟಿಸುವಂಥ ಸಂದರ್ಭ ಇದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಕೇಂದ್ರದ ಹಣಕಾಸಿನ ಸಚಿವರು ಯಾವ ಆಧಾರದ ಮೇಲೆ ಆರೋಪ ಮಾಡಿದ್ದಾರೆನ್ನುವುದಕ್ಕೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಆಧಾರ ಯಾವುದು ಎಂದು ಅವರನ್ನೇ ಕೇಳಬೇಕು. ಉದ್ದೇಶ ಏನಿದೆ ಎನ್ನುವುದನ್ನು ನಾನು ಹೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಪ್ರಶ್ನೆಗೆ ನೀವೇ ಏತಕ್ಕೆ ಉತ್ತರ ಹೇಳಬೇಕು, ಅವರೇ ಹೇಳಬಹುದಲ್ಲ. ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯಾಲಯದಿಂದಲೇ ಪ್ರಶ್ನೆ ಹಾಕಿರಬಹುದೆಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಸದಸ್ಯರುಗಳಿಗೆ ತಪ್ಪು ತಪ್ಪು ಸುಳ್ಳು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಾರ್ಟಿ ಸಣ್ಣದು ಇದೆ. ಸುಳ್ಳು ಇಲ್ಲದೆ ಕೆಲವು ನಡೆಯುತ್ತಿವೆ. ಅದು ಮುಂದೆ ಬೆಳೆದುಕೊಳ್ಳುತ್ತಾ ಹೋಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೆ, ವೈರಿಂಗ್ ಈಗ ಹಾಕುವುದಕ್ಕೆ ಶುರು ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯಕ್ಕೆ ಕಳೆದ ನಾಲ್ಕು ವರ್ಷಗಳಿಂದಲೂ ಸತತವಾದಂಥ ಅಭಾವ ಪರಿಸ್ಥಿತಿಯನ್ನು ಎದುರಿಸುತ್ತಾ ಬಂದಿದೆ. ಅಭಾವ ಪರಿಸ್ಥಿತಿಯಿಂದ ರಾಜ್ಯ ಸರ್ಕಾರದ ಆದಾಯ ಕಡಿಮೆಯಾಗಿರುವುದು ಅಷ್ಟೇ ಅಲ್ಲ, ರಾಜ್ಯದ ಒಟ್ಟು ಉತ್ಪಾದನೆಯಲ್ಲೂ ಬಹಳಷ್ಟು ಕಡಿಮೆಯಾಗಿದೆ. ವ್ಯವಸಾಯ ಕ್ಷೇತ್ರದಲ್ಲಿ ಶೇಕಡ ೭೦ರಷ್ಟು ಖೋತಾ ಆಗಿದೆ. ವಿದ್ಯುತ್ ಅಭಾವದಿಂದ ಕೈಗಾರಿಕಾ ಕ್ಷೇತ್ರದಲ್ಲಿ ಅರ್ಧದಷ್ಟು ಖೋತಾ ಆಗಿದೆ. ಈ ಎರಡರ ಪರಿಣಾಮವಾಗಿ ಸರ್ಕಾರದ ಬೊಕ್ಕಸದಲ್ಲಿಯೂ ಕಡಿಮೆಯಾಗಿದೆ. ಇದರ ಹೊರತು ಸುಮಾರು ೬೦೦ ಕೋಟಿಯಷ್ಟು ಹಣವನ್ನು ಬರಗಾಲ ಪರಿಹಾರಕ್ಕಾಗಿ ಖರ್ಚು ಮಾಡಿದ್ದೇವೆ. ೪ ವರ್ಷಗಳ ಯೋಜನೆಗಳಲ್ಲಿ ನಾವು ತೊಡಲು ನಿಗಧಿಪಡಿಸಿದ ಹಣಕ್ಕಿಂತ ಹೆಚ್ಚು ಖರ್ಚು ಮಾಡಿದ್ದೇವೆಯೇ ಹೊರತು ಕಡಿಮೆ ಖರ್ಚು ಮಾಡಿಲ್ಲ. ಇನ್‌ಫ್ಲೇಷನ್ ಕಟ್ಟುವರಿಯಿಂದ ರಾಜ್ಯ ಸರ್ಕಾರಿ ನೌಕರರಿಗೆ ಎಂಟು ಸಾರಿ ಭತ್ಯೆಯನ್ನು ಹೆಚ್ಚು ಮಾಡಬೇಕಾಯಿತು. ಇಂದು ಸ್ವಲ್ಪ ಮಟ್ಟಿಗೆ ಸರ್ಕಾರಕ್ಕೆ ಆರ್ಥಿಕ ತೊಂದರೆ ಇದೆ. ಇಲ್ಲ ಎಂದು ನಾನು ಕೇಳುವುದಿಲ್ಲ, ಅದಕ್ಕೆ ವಿಶೇಷವಾದಂಥ ಅರ್ಥವನ್ನು ಕಲ್ಪಿಸಿ, ಇಲ್ಲಿ ಮಾನ್ಯ ಪ್ರಾಯ್ಮಿಯವರು ಇಲ್ಲ, ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮರುದಿನವೇ ದಿವಾಳಿಯಾಗುತ್ತದೆಂದು ಹೇಳಿದ್ದರು. ಇವೊತ್ತಿನವರೆಗೂ ಅವರ ಕನಸು ನನಸಾಗಲಿಲ್ಲ. ಅಂಥ ಪರಿಸ್ಥಿತಿಗೆ ಸರ್ಕಾರ ಬರಲಿಲ್ಲ. ಇಂಥ ಮುಗ್ಗಟ್ಟಿನ ಪರಿಸ್ಥಿತಿಯನ್ನು ಎದುರಿಸಿಯೂ ಯೋಜನೆಯ ಮೊತ್ತವನ್ನು ಕಡಿಮೆ ಮಾಡಿಲ್ಲ. ಈ ವಿಷಯದಲ್ಲಿ ನನಗೆ ಅವರು ಶಹಬಾಷ್‌ಗಿರಿ ಕೊಡಬೇಕಾಗಿತ್ತು. ಅದನ್ನು ಮಾಡುವಷ್ಟು ಔದಾರ್ಯ ಇಲ್ಲ. ಸ್ವಲ್ಪ ಮಟ್ಟಿಗೆ ಆರ್ಥಿಕ ತೊಂದರೆ ಈ ಹೊತ್ತಿನಲ್ಲಿ ಇದೆ. ಅದನ್ನು ಎದುರಿಸಿಕೊಂಡು ಹೋಗತಕ್ಕ ವಿಶ್ವಾಸವೂ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯದ ಆರ್ಥಿಕ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಕುಸಿದು ಬಿದ್ದಿದೆ ಎಂದು ಒಪ್ಪಿಕೊಂಡಿದ್ದಾರೆ. ಇನ್ನೊಂದು ಕಡೆ ವೇಲ್ಫೇರ್‌ಸ್ಟೇಟ್‌ನಲ್ಲಿ ಮಾನ್ಯ ಸದಸ್ಯರು ಸಾಹೇಬರು ಇದನ್ನು ಒಪ್ಪಿಕೊಳ್ಳಲಿಲ್ಲ ಎಂಬುದನ್ನು ಅವರ ಗಮನಕ್ಕೆ ತರುತ್ತೇನೆ. ಇವೊತ್ತು ಅನೇಕ ಏಡೆಡ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಕೆಲಸ ಮಾಡತಕ್ಕವರಿಗೆ ಹಾಗೂ ಶೋಕೋಪಯೋಗಿ ಇಲಾಖೆಯಲ್ಲಿ ಏನು ಕೆಲಸಗಳಾಗಿವೆ, ಅವರಿಗೆ ಕೆಲಸ ಇಲ್ಲ. ಇಷ್ಟಿಯವರೆವಿಗೂ ಎಲ್.ಓ.ಸಿ,

ಕೂಡ ಹೋಗಿಲ್ಲ. ಕೋಟ್ಯಾಂತರ ರೂಪಾಯಿಗಳು ಗ್ರಾಂಟ್ಸ್‌ನ್ನು ರಿಲೀಸ್ ಮಾಡಿಲ್ಲ. ಸಾವಿರಾರು ಜನ ಓಲ್ಡ್‌ಏಜ್ ಪೆನ್‌ಷನ್, ವಿಡೋ ಪೆನ್‌ಷನ್‌ನವರಿಗೂ ಕೂಡ ಇಲ್ಲಿಯವರೆವಿಗೂ ಹಣ ಮುಟ್ಟಿಲ್ಲ. ತಮ್ಮ ಹತ್ತಿರ ದುಡ್ಡು ಇದ್ದಿದ್ದರೆ ಈ ಪರಿಸ್ಥಿತಿ ಏತಕ್ಕೆ ಬಂತು? ಸಂಬಳ ಕೊಡತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲ ಅಂದರೆ ನಾವು ಏನು ಹೇಳಬೇಕು? ಅನೇಕ ಕಡೆಗಳಲ್ಲಿ ೩ ತಿಂಗಳು ೬ ತಿಂಗಳುಗಳಿಂದ ಸಂಬಳ ಕೊಟ್ಟಿಲ್ಲ. ಇನ್ನು ತೋಟಿತಳವಾರರಿಗೆ ಅನೇಕ ಕಡೆಗಳಲ್ಲಿ ಹಣ ಬಿಡುಗಡೆ ಮಾಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಸಾಕಷ್ಟು ಚರ್ಚೆ ಮಾಡಲಿಕ್ಕೆ ಅವಕಾಶ ಇನ್ನು ಕೆಲವೇ ದಿವಸಗಳಲ್ಲಿ ಸಿಕ್ಕುತ್ತದೆ. ಬಜೆಟ್ ಮಂಡಿಸುವ ಅವಧಿಯಲ್ಲಿ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡುತ್ತೇನೆ. ಎಲ್ಲಾ ಕಡೆ ಸಂಬಳ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—೬೦೦–೭೦೦ ಹೆಣ್ಣು ಮಕ್ಕಳು ಇಲ್ಲಿಯೇ ಕುಳಿತಿದ್ದಾರೆ, ಅವರಿಗೆ ೬ ತಿಂಗಳಿಂದ ಸಂಬಳ ಕೊಟ್ಟಿಲ್ಲ.

ಗುಲ್ಬರ್ಗ ಜಿಲ್ಲೆಯ ಧಾರ್ಮಿಕ ಸ್ಥಳಗಳಿಗೆ ಸಾರಿಗೆ ಸೌಲಭ್ಯಗಳು

೧೩೯ (೯೭) ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರವಾಸಿಗರಿಗಾಗಿ ಐತಿಹಾಸಿಕ ಮತ್ತು ಧಾರ್ಮಿಕ ಸ್ಥಳಗಳನ್ನು ತೋರಿಸಲು ಪ್ರವಾಸೋದ್ಯಮ ಮಂಡಳಿಯವರು ತಮ್ಮ ವಾಹನಗಳನ್ನು ಓಡಾಡಿಸುವ ಮತ್ತು ವಾಯುದೂತದ ನಿಲ್ದಾಣ ನಿರ್ಮಾಣದ ಉದ್ದೇಶವೇನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಪ್ರವಾಸಿಗರಿಗಾಗಿ ತೋರಿಸುವ ಸ್ಥಳಗಳು ಮತ್ತು ವಾಹನಗಳ ಮಾರ್ಗ ಅದಲ್ಲದೆ, ವಾಯುದೂತ ಪ್ರಾರಂಭಮಾಡಲು ಕ್ರಮ ಕೈಗೊಳ್ಳುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—

ಅ) ಹೌದು.

ಆ) ಪ್ರೇಕ್ಷಕರಿಗೆ ಅನುಕೂಲವಾಗಲು ಗುಲ್ಬರ್ಗ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ಒಂದು ವಾಹನವನ್ನು ಒದಗಿಸಲು ಉದ್ದೇಶಿಸಿದ್ದಾರೆ.

ಇನ್ನು ಗುಲ್ಬರ್ಗ ಪಟ್ಟಣಕ್ಕೆ ವಾಯುದೂತ ಸಂಪರ್ಕ ಕಲ್ಪಿಸಲು ನಿಲ್ದಾಣಕ್ಕೆ ಬೇಕಾದಆಗತ್ಯ ಜಮೀನನ್ನು ಈಗಾಗಲೇ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ವಿಮಾನ ನಿಲ್ದಾಣ ರಚನೆಯಾದ ಕೂಡಲೇ ವಾಯುದೂತ ಸೇವೆಯನ್ನು ಆರಂಭಿಸಲು ಕೇಂದ್ರ ಸರ್ಕಾರವನ್ನು ಕೋರಲಾಗುವುದು.

ಶ್ರೀ ಎಸ್. ಕೆ. ಕಾಂತಾ.—ಗುಲ್ಬರ್ಗ ನಗರದಲ್ಲಿ ಬಹುಮನಿ ಕಾಲದ ಫೋರ್ಟ್ ಇದೆ. ಅದು ಇಡೀ ಏಷ್ಯಾದಲ್ಲಿಯೇ ಮೊದಲನೆಯ ಸ್ಥಾನ ಹೊಂದಿರತಕ್ಕ ಕಟ್ಟಡ. ಅದರ ಬಗ್ಗೆ ಪ್ರವಾಸೋದ್ಯಮ ನಿಗಮದವರು ಟೂರಿಸ್ಟ್ ಮ್ಯಾಪ್‌ನಲ್ಲಿ ತೋರಿಸಿಲ್ಲ. ಅದೇರೀತಿ ಗುಲ್ಬರ್ಗದಲ್ಲಿ ಖಿಜಾ ಬಂದೇ ನವಾಜ್ ದರ್ಗ ಇದೆ. ಇದೂ ಸಹ ಇಡೀ ದೇಶದಲ್ಲಿಯೇ ದೊಡ್ಡ ದರ್ಗ. ಅದರ ಬಗ್ಗೆಯೂ ಸಹ ಟೂರಿಸ್ಟ್ ಮ್ಯಾಪ್‌ನಲ್ಲಿ ತೋರಿಸಿಲ್ಲ ಇದನ್ನೆಲ್ಲಾ ನೋಡಿದರೆ ಸರ್ಕಾರ ನಮ್ಮ ಭಾಗವನ್ನೇ ಸಂಪೂರ್ಣ ಅಲಕ್ಷ್ಯ ಮಾಡಿದೆ ಎಂದು ಹೇಳಬಹುದು. ಪ್ರವಾಸೋದ್ಯಮದವರು ಇಲ್ಲಿಯವರೆಗೆ ಯಾವುದೇ ರೀತಿಯ ಸೌಲಭ್ಯವನ್ನು ನಮ್ಮ ಭಾಗಕ್ಕೆ ಕೊಟ್ಟಿಲ್ಲ, ಆದ್ದರಿಂದ, ಎಲ್ಲಾ ರೀತಿಯ ಸೌಲಭ್ಯಗಳನ್ನು ನಮ್ಮ ಭಾಗಕ್ಕೆ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇನ್ನೊಂದು ವಿಷಯ ಎಂದರೆ, ಪ್ರವಾಸಿಗಳು ಬರತಕ್ಕ ಸ್ಥಳದಲ್ಲಿ ಎಷ್ಟೋ ವರ್ಷಗಳಿಂದ ಆಲ್ಲಿ ಒಂದು ಹೆಂಡದ ಅಂಗಡಿ ನಡೆಯುತ್ತಿತ್ತು. ಇಡೀ ಗುಲ್ಬರ್ಗ ಜನರ ಒಂದು ಒತ್ತಡದಿಂದಅದು ಬಂದ್ ಆಯಿತು. ಅನಂತರ ಮತ್ತೆ ಅದನ್ನು ಪ್ರಾರಂಭ ಮಾಡಿದ್ದಾರೆ, ಅದನ್ನು ನಿಲ್ಲಿಸಬೇಕೆಂದು ನಾನು ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಗುಲ್ಬರ್ಗ ಪ್ರದೇಶ ಪ್ರವಾಸಿಗರನ್ನು ಆಕರ್ಷಿಸತಕ್ಕಂಥ ಅನೇಕ ಐತಿಹಾಸಿಕ ಸ್ಥಳ ಮತ್ತು ಕಟ್ಟಡಗಳನ್ನು ಒಳಗೊಂಡಿದ್ದರೂ, ಪ್ರವಾಸಿಗರ ಒಂದು ಆಕರ್ಷಣೆ ಮಾಡತಕ್ಕ ಕೇಂದ್ರ ಮಾಡಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಮುಖ್ಯ ತೊಂದರೆ